## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2019-20 ನೇ ಸಾಲಿನ ಆಯವ್ಯಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖಾ ಗಣಕೀಕರಣ ಲೆಕ್ಕಶೀರ್ಷಿಕೆ 2515-00-101-0-24-059 ಯೋಜನೆಯಡಿ ಒದಗಿಸಲಾಗಿರುವ ಅನುದಾನದಲ್ಲಿ ಹೊಸ ಯೋಜನೆಗಾಗಿ ನಿಗದಿಪಡಿಸಿದ ₹ 945.00 ಲಕ್ಷಗಳ ಅನುದಾನದ ಕ್ರಿಯಾಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:
1. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಜಿ.ಪಂ) ಇವರ ಅನಧಿಕೃತ ಟಿಪ್ಪಣಿ ಸಂಖ್ಯೆ:ಆಇ/22/ವೆಚ್ಚ-6/2019, ದಿನಾಂಕ:02.04.2019
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/154/ಎಎಫ್ಎನ್/2018, ಬೆಂಗಳೂರು, ದಿನಾಂಕ:10.04.2019.
3. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/43/ಗ.ಕೋಶ/2019, ಬೆಂಗಳೂರು, ದಿನಾಂಕ:18.05.2019.

*****

<u>ಪ್ರಸ್ತಾವನೆ:</u>

ಓದಲಾದ (2) ಸರ್ಕಾರದ ಆದೇಶದಲ್ಲಿ ಯೋಜನೆ ಮತ್ತು ಯೋಜನೇತರ ಕಾರ್ಯಕ್ರಮಗಳನ್ನು 2019-20 ನೇ ಸಾಲಿಗೆ ಮುಂದುವರಿಸಲಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ 2019-20 ನೇ ಸಾಲಿನ ಆಯವ್ಯಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಗಣಕೀಕರಣ ಲೆಕ್ಕ ಶೀರ್ಷಿಕೆ:2515-00-101-0-24-059 ಯೋಜನೆಯಡಿಯಲ್ಲಿ ₹ 2100.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿರುತ್ತದೆ.

ಸದರಿ ಯೋಜನೆಯಡಿಯಲ್ಲಿ ಒದಗಿಸಲಾಗಿರುವ ₹ 2100.00 ಲಕ್ಷ ಅನುದಾನದಲ್ಲಿ ಮುಂದುವರೆದ ಕಾರ್ಯಕ್ರಮಗಳಿಗೆ ನಿಗದಿಪಡಿಸಿದ ₹ 1155.00 ಲಕ್ಷ ಅನುದಾನಕ್ಕೆ ತಯಾರಿಸಿದ ಕ್ರಿಯಾಯೋಜನೆಗೆ ಓದಲಾದ (3) ರಲ್ಲಿ ಅನುಮೋದನೆ ಪಡೆಯಲಾಗಿದೆ. ಹೊಸ ಯೋಜನೆಗಾಗಿ ₹ 945.00 ಲಕ್ಷ ಅನುದಾನವನ್ನು ನಿಗದಿಪಡಿಸಲಾಗಿದ್ದು, ಕ್ರಿಯಾಯೋಜನೆಯನ್ನು ಈ ಕೆಳಗಿನಂತೆ ತಯಾರಿಸಲಾಗಿದೆ.

ಸದರಿ ಯೋಜನೆಯಲ್ಲಿ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರವನ್ನು ಮುಖ್ಯ ಸಂಪಾದಕರು, (ಕರ್ನಾಟಕ ವಿಕಾಸ) ಇವರಿಗೆ ಹಾಗೂ ಮೇಲುರುಜು ಮಾಡುವ ಅಧಿಕಾರವನ್ನು ಪ್ರಧಾನ ಸಂಪಾದಕರು, (ಕರ್ನಾಟಕ ವಿಕಾಸ) ರವರಿಗೆ ವಹಿಸಲಾಗಿದೆ. 2019-20 ನೇ ಸಾಲಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಗಣಕೀಕರಣ ಲೆಕ್ಕ ಶೀರ್ಷಿಕೆ: 2515-00-101-0-24-059 ಯೋಜನೆಯಡಿಯಲ್ಲಿ ಒದಗಿಸಲಾಗಿರುವ ₹ 2100.00 ಲಕ್ಷಗಳ ಅನುದಾನದಲ್ಲಿ ಹೊಸ ಯೋಜನೆ ನಿಗದಿಪಡಿಸಿದ ₹ 945.00 ಲಕ್ಷ ಅನುದಾನಕ್ಕೆ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಗ್ರಾಅಪ ಇವರ ಅನುಮೋದನೆಯಂತೆ ಈ ಕೆಳಕಂಡಂತೆ ತಯಾರಿಸಿದ ಕ್ರಿಯಾಯೋಜನೆಗೆ ಅನುಮೋದನೆ ನೀಡಬೇಕಾಗಿರುವುದರಿಂದ ಈ ಆದೇಶ.

### <u>ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/43/ಗ.ಕೋಶ/2019, ಬೆಂಗಳೂರು, ದಿನಾಂಕ:13.08.2019</u>

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ 2019-20 ನೇ ಸಾಲಿನ ಆಯವ್ಯಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಗಣಕೀಕರಣ ಲೆಕ್ಕಶೀರ್ಷಿಕೆ:2515-00-101-0-24-059 ಯೋಜನೆಯಡಿಯಲ್ಲಿ ಒದಗಿಸಲಾಗಿರುವ ₹ 2100.00 ಲಕ್ಷ ಅನುದಾನದಲ್ಲಿ ಈ ಕೆಳಕಂಡ ಹೊಸ ಯೋಜನೆಗಳಿಗೆ ನಿಗದಿಪಡಿಸಿದ ₹ 945.00 ಲಕ್ಷಗಳ ಅನುದಾನದ ಕ್ರಿಯಾಯೋಜನೆಗೆ ಅನುಮೋದನೆ ನೀಡಲಾಗಿದೆ.

| ಕ್ರ.ಸಂ | ವಿವರ | ಮೊತ್ತ (ರೂ.ಲಕ್ಷಗಳಲ್ಲಿ) |
|---|---|---|
| 1 | 2 | 3 |
| 1 | ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆಯಲ್ಲಿ "ಭೂಮಿ " ತಂತ್ರಾಂಶ ನಿರ್ವಹಣಾ ಕೋಶದ ಮಾದರಿಯಲ್ಲಿ ಇಲಾಖೆಯಲ್ಲಿ ಉಪಯೋಗಿಸುತ್ತಿರುವ ಪಂಚತಂತ್ರ ಮತ್ತು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ 2ನೇ ಅವತರಣಿ, ಜಲಾಮೃತ ತಂತ್ರಾಂಶ, ಮೊಬೈಲ್ ಆ್ಯಪ್ ಅನುಷ್ಠಾನ ಮತ್ತು ಇ-ಸ್ವತ್ತು ಮುಂತಾದ ತಂತ್ರಾಂಶಗಳನ್ನು ಐ.ಟಿ ಸಿಬ್ಬಂದಿಯಿಂದ ಕೂಡಿದ ಯೋಜನಾ ಉಸ್ತುವಾರಿ ಘಟಕ (PMU)ವನ್ನು Center for Smart Governance (CSG) ಮುಖಾಂತರ ಸ್ಥಾಪನೆ ಹಾಗೂ ನಿರ್ವಹಣೆ. | ₹ 595.00 |
| 2 | 2019-20 ನೇ ಸಾಲಿನ ಆಯವ್ಯಯ ಘೋಷಣೆಯಂತೆ (ಬಜೆಟ್ ಪ್ಯಾರಾ ಸಂಖ್ಯೆ:222) ಗ್ರಾಮ ಪಂಚಾಯತ್‌ಗಳು ಆರ್ಥಿಕವಾಗಿ ಸದೃಢಗೊಳ್ಳಲು ತಮ್ಮ ಸ್ವಂತ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳುವುದು ಅಗತ್ಯವಾಗಿರುವುದರಿಂದ ಗ್ರಾಮ ಪಂಚಾಯತ್ ವ್ಯಾಪ್ತಿಯ ಎಲ್ಲಾ ಆಸ್ತಿಗಳನ್ನು ಡಿಜಿಟಲೀಕರಣಗೊಳಿಸಿ ತೆರಿಗೆ ವ್ಯಾಪ್ತಿಯ ಹೊರಗೆ ಉಳಿದ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸುವ ಬಗ್ಗೆ.<br>ಗ್ರಾಮ ಪಂಚಾಯತ್ ವ್ಯಾಪ್ತಿಯ ಎಲ್ಲಾ ಆಸ್ತಿಗಳನ್ನು ಡಿಜಿಟಲೀಕರಣಗೊಳಿಸುವ ಬಗ್ಗೆ ದಿನಾಂಕ:21.03.2019 ರಂದು ಜರುಗಿದ ಸಭೆಯಲ್ಲಿ ತೀರ್ಮಾನಿಸಿದಂತೆ pilot ಯೋಜನೆಯನ್ನು ಬೆಂಗಳೂರು ನಗರ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿ ಅನುಷ್ಠಾನ ಮಾಡಲು. | ₹ 350.00 |
| | ಒಟ್ಟು | **₹ 945.00** |

ಸದರಿ ಯೋಜನೆಯಲ್ಲಿ ಹಣ ಸೆಳೆಯುವ ಹಾಗೂ ಬಟವಾಡೆ ಮಾಡುವ ಅಧಿಕಾರವನ್ನು ಸಂಪಾದಕರು, (ಕರ್ನಾಟಕ ವಿಕಾಸ) ಹಾಗೂ ಮೇಲು ರುಜು ಮಾಡುವ ಅಧಿಕಾರವನ್ನು ಪ್ರಧಾನ ಸಂಪಾದಕರು(ಕರ್ನಾಟಕ ವಿಕಾಸ) ಇವರು ನಿರ್ವಹಿಸಲು ಆದೇಶಿಸಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಸಂ:ಆಇ/1/ಟಿಎಪಿ/96, ದಿನಾಂಕ:10-07-1996ರಲ್ಲಿ ಇಲಾಖೆ ಕಾರ್ಯದರ್ಶಿಯವರಿಗೆ ಪ್ರದತ್ತವಾದ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ವಿ. ನಾಗರಾಜ)
ನಿರ್ದೇಶಕರು (ಇ-ಆಡಳಿತ) ಹಾಗೂ
ಪ/ನಿ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ (ಪಂ.ರಾಜ್) ಇವರ ಆಪ್ತ ಕಾರ್ಯದರ್ಶಿಯವರಿಗೆ,
2. ಮಹಾಲೇಖಪಾಲರು(ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು.
4. ನಿರ್ದೇಶಕರು, ಯೋಜನಾ ಉಸ್ತುವಾರಿ ಮತ್ತು ಮಾಹಿತಿ ವಿಭಾಗ, ಗ್ರಾಅಪ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಯೋಜನಾ ಮಾಹಿತಿ ಮೇಲ್ವಿಚಾರಣಾ ವಿಭಾಗ, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ.
6. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
7. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
8. ಉಪಕಾರ್ಯದರ್ಶಿ(ಆಡಳಿತ-1) ಹಾಗೂ ರಾಜ್ಯ ನೋಡಲ್ ಅಧಿಕಾರಿ, ಖಜಾನೆ-2 ಕೋಶ, ಗ್ರಾಅಪ ಇಲಾಖೆ.
9. ಪ್ರಧಾನ ಸಂಪಾದಕರು, ಕರ್ನಾಟಕ ವಿಕಾಸ, ಗ್ರಾಅಪ, ಬೆಂಗಳೂರು.
10. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿಗಳು, ಗ್ರಾಅಪ, ಬೆಂಗಳೂರು.